235 ಶ್ರೀ ದಿನಕರ ಕೇಶವ ಶೆಟ್ಟಿ, ಕುಮಟಾ : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರಸ್ತುತ ಸರ್ಕಾರದಲ್ಲಿ ಕಳೆದ ಒಂದು ವರ್ಷದಿಂದ ಲೋಕೋಪಯೋಗಿ ಇಲಾಖೆಯಲ್ಲಿ ವರ್ಗಾವಣೆಯಾದ ವಿವಿಧ ಹುದ್ದೆಯ ಇಂಜಿನಿಯರುಗಳ ಸಂಖ್ಯೆ ಎಷ್ಟು; ಲೋಕೋಪಯೋಗಿ, ನೀರಾವರಿ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗಳಲ್ಲಿ ವರ್ಗಾವಣೆಗೊಂಡ ಇಂಜಿನಿಯರ್‌ಗಳ ಹುದ್ದೆವಾರು ವಿವರ ನೀಡುವುದು;

ಆ) ವರ್ಗಾವಣೆಗೊಂಡು ಸ್ಥಳ ನಿಯುಕ್ತಿಗೊಳ್ಳದೇ ಇರುವ ಇಂಜಿನಿಯರ್‌ಗಳ ಸಂಖ್ಯೆ ಎಷ್ಟು; (ಹುದ್ದೆವಾರು ಇಂಜಿನಿಯರ್‌ಗಳ ವಿವರ ನೀಡುವುದು);

ಇ) ಇಂಜಿನಿಯರ್‌ಗಳ ಸ್ಥಳ ನಿಯುಕ್ತಿಗೊಳ್ಳದಿರುವುದರಿಂದ ಪ್ರತಿ ತಿಂಗಳು ಸರಕಾರಕ್ಕೆ ಆಗುತ್ತಿರುವ ಹೊರೆ ಎಷ್ಟು; ಇವರು ಸ್ಥಳ ನಿಯುಕ್ತಿಗೊಳ್ಳದಿರುವುದಕ್ಕೆ ಕಾರಣಗಳೇನು?

ಶ್ರೀ ಪಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಲೋಕೋಪಯೋಗಿ ಇಲಾಖೆಯಲ್ಲಿ ವರ್ಗಾವಣೆಯಾದ ವಿವಿಧ ಹುದ್ದೆಯ ಇಂಜಿನಿಯರ್‌ಗಳ ಒಟ್ಟು ಸಂಖ್ಯೆ. 1274.

ಲೋಕೋಪಯೋಗಿ, ನೀರಾವರಿ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗಳಲ್ಲಿ ವರ್ಗಾವಣೆಗೊಂಡ ಇಂಜಿನಿಯರ್‌ಗಳ ಹುದ್ದೆವಾರು ವಿವರಗಳನ್ನು ಅನುಬಂಧ–1ರಲ್ಲಿ ನೀಡಲಾಗಿದೆ.

ಆ) ಲೋಕೋಪಯೋಗಿ ಇಲಾಖೆಯ ಹಲವಾರು ಇಲಾಖೆಗಳಿಗೆ ಇಂಜಿನಿಯರುಗಳ ಸೇವೆ ಒದಗಿಸುವ ಇಲಾಖೆಯಾಗಿದೆ. ಆಯಾ ಇಲಾಖೆಗಳು ಸ್ಥಳ ನಿಯುಕ್ತಿಗೊಳಿಸಬೇಕಾಗಿದೆ.

ಇ) ಕಂಡಿಕೆ (ಆ) ರಲ್ಲಿಯ ಉತ್ತರದಿಂದ ಉದ್ಭವಿಸುವುದಿಲ್ಲ.

ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯ ಅಧೀಕ್ಷಕ ಇಂಜಿನಿಯರ್, ಕಾರ್ಯಪಾಲಕ ಇಂಜಿನಿಯರ್ ಹಾಗೂ ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ಗಳು ಇಲಾಖೆಯಲ್ಲಿ ಅಲ್ಲದೆ ವಿವಿಧ ಇಲಾಖೆಗಳಲ್ಲಿ ನಿಯೋಜನೆಯ ಮೇಲೆ ಕರ್ತವ್ಯನಿರ್ವಹಿಸುತ್ತಿದ್ದಾರೆ. ಆಡಳಿತಾತ್ಮಕವಾಗಿ ಬೇರೆ ಇಲಾಖೆಗಳಿಂದ ಇವರ ಸೇವೆಗಳನ್ನು ಇಲಾಖೆಗೆ ಹಿಂತಿರುಗಿಸಿದ ಸಂದರ್ಭಗಳಲ್ಲಿ ಇವರಿಗೆ ಸ್ಥಳನಿಯುಕ್ತಿ

ನೀಡುವುದರ ಜೊತೆಗೆ ವರ್ಗಾವಣೆ ಮಾಡುವ ಅನಿವಾರ್ಯ ಸಂದರ್ಭಗಳು ಉಂಟಾಗುತ್ತವೆ. ಸ್ಥಳ ವರ್ಗಾವಣೆ ಮಾರ್ಗಸೂಚಿಗಳನ್ವಯ ವೃಂದ ನಿರ್ವಹಣಾ ಪ್ರಾಧಿಕಾರದ ಶಿಫಾರಸ್ಸು ಪಡೆದು ಈ ಪ್ರಸ್ತಾವನೆಗಳಿಗೆ ಮಾನ್ಯ ಇಲಾಖಾ ಸಚಿವರ ಹಾಗೂ ಮಾನ್ಯ ಮುಖ್ಯಮಂತ್ರಿಗಳ ಅನುಮೋದನೆ ಪಡೆಯಬೇಕಾಗುತ್ತದೆ. ಸದರಿ ಪ್ರಕ್ರಿಯೆಗೆ ಸಂಬಂಧಿಸಿದಂತೆ ಆಡಳಿತಾತ್ಮಕ ಕಾರಣಗಳಿಂದ ನೇಮಕಾತಿ ನೀಡಲು ವಿಳಂಬ ಉಂಟಾಗುವ ಸಂದರ್ಭಗಳಲ್ಲಿ ಅಧಿಕಾರಿಗಳು ಅನಿವಾರ್ಯವಾಗಿ ಕಡ್ಡಾಯ ನಿರೀಕ್ಷಣಾವಧಿಯಲ್ಲಿ ಇರಬೇಕಾಗುತ್ತದೆ.

ಅನುಬಂಧ–1

ಕ್ರ. ಸಂ.	ಇಲಾಖೆ	ವೃಂದಗಳು					ಒಟ್ಟು
		ಅಧೀಕ್ಷಕ ಇಂಜಿನಿಯರ್	ಕಾರ್ಯಪಾಲಕ ಇಂಜಿನಿಯರ್	ಸಹಾಯಕ ಕಾರ್ಯಪಾಲಕ ಇಂಜಿನಿಯರ್	ಸಹಾಯಕ ಇಂಜಿನಿಯರ್	ಕಿರಿಯ ಇಂಜಿನಿಯರ್	
1	ಲೋಕೋಪಯೋಗಿ ಇಲಾಖೆ	49	154	267	381	423	1274
2	ಜಲಸಂಪನ್ಮೂಲ ಇಲಾಖೆ	06	34	76	53	17	186
3	ಗ್ರಾ.ಅಪ. ಇಲಾಖೆ	–	12	50	193	220	475